**◆ ‘ರುಸ್ತುಂ’ ಸಿನಿಮಾದಲ್ಲಿ ನಿಮಗೆ ತುಂಬ ಇಷ್ಟವಾದ ಅಂಶಗಳು ಯಾವುವು?**

ನಾನು ಪಕ್ಕಾ ಕಮರ್ಷಿಯಲ್ ಸಿನಿಮಾ ಮಾಡಿ ಸುಮಾರು ದಿನಗಳಾಗಿಬಿಟ್ಟಿದ್ದವು. ಕಳೆದ ಒಂದೆರಡು ವರ್ಷಗಳಿಂದ ನಾನು ಮಾಡಿದ ಸಿನಿಮಾಗಳೆಲ್ಲ ರೆಗ್ಯುಲರ್ ಕಮರ್ಷಿಯಲ್ ಮಾದರಿಗಿಂತ ಬೇರೆ ರೀತಿಯ ಸಿನಿಮಾಗಳೇ. ‘ಟಗರು’, ‘ಕವಚ’, ‘ಮುಫ್ತಿ’ ಈ ಎಲ್ಲವೂ ಸ್ವಲ್ಪ ಕ್ಲಾಸ್ ಟಚ್ ಇರುವ ಸಿನಿಮಾಗಳು. ಇದು ಪಕ್ಕಾ ಮಾಸ್ ಮಸಾಲಾ ಸಿನಿಮಾ. ಅದರ ಜೊತೆಗೇ ಪೊಲೀಸ್ ಅಧಿಕಾರಿಯ ಪಾತ್ರ. ಪೊಲೀಸ್ ಅಧಿಕಾರಿ ಅಂದಾಕ್ಷಣ ನನಗೆ ಜಾಸ್ತಿ ಇಂಟ್ರೆಸ್ಟ್ ಬರುತ್ತದೆ. ಯಾಕೆಂದರೆ ಈ ಪೊಲೀಸ್ ಅಧಿಕಾರಿ ಪಾತ್ರಗಳಿಗೆ ನನ್ನ ವೃತ್ತಿಜೀವನದಲ್ಲಿ ಸಕ್ಸೆಸ್ ರೇಟ್ ಜಾಸ್ತಿ ಇದೆ. ಹಾಗಾಗಿ ಒಪ್ಪಿಕೊಂಡೆ. ಸಾಕಷ್ಟು ಮನರಂಜನೆ ಇದೆ. ಈ ಪಾತ್ರದ ಆ್ಯಟಿಟ್ಯೂಡ್ ಕೂಡ ನಂಗೆ ಇಷ್ಟವಾಯ್ತು. ಶ್ರದ್ಧಾ ಶ್ರೀನಾಥ್, ವಿವೇಕ್ ಒಬೆರಾಯ್ ಕೂಡ ಚೆನ್ನಾಗಿ ನಟಿಸಿದ್ದಾರೆ.

**◆ ‘ರುಸ್ತುಂ’ ಅನ್ನೋ ಟೈಟಲ್‌ನಲ್ಲಿಯೇ ಮಾಸ್ ಗುಣವಿದೆ. ಆ ಶೀರ್ಷಿಕೆಯ ವಿಶೇಷ ಏನು?**

ಅದು ನಾಯಕನ ವ್ಯಕ್ತಿತ್ವವನ್ನು ಸೂಚಿಸುವ ಪದ. ಅಂದರೆ ನಾಯಕ ಯಾವುದೇ ವಿಷಯದಲ್ಲಿಯೂ ಫರ್ಫೆಕ್ಟ್. ಅವ್ನು ಬಿಡಪ್ಪಾ ಎಲ್ಲದ್ರಲ್ಲೂ ರುಸ್ತುಂ ಅಂತಾರಲ್ವಾ. ಆ ಥರದ ಪಾತ್ರ ಅದು.

**◆ ರವಿವರ್ಮ ಅವರ ನಿರ್ದೇಶನದಲ್ಲಿ ಕೆಲಸ ಮಾಡಿದ ಅನುಭವ ಹೇಗಿತ್ತು?**

ಸಾಹಸನಿರ್ದೇಶಕನಾಗಿ ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಹೆಸರು ಮಾಡಿರುವ ರವಿಮರ್ಮ ಮೊದಲಬಾರಿ ನಿರ್ದೇಶಿಸುತ್ತಿರುವ ಸಿನಿಮಾ ಇದು. ಅವರು ತುಂಬ ವರ್ಷಗಳಿಂದ ಇಂಡಸ್ಟ್ರಿಯಲ್ಲಿರುವವರು. ಸಾಹಸನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದರೂ ಸಿನಿಮಾದ ಎಲ್ಲ ವಿಭಾಗಗಳ ಕುರಿತೂ ಗೊತ್ತಿದೆ. ಅದಕ್ಕಿಂತ ಹೆಚ್ಚಾಗಿ ಸಿನಿಮಾ ನಿರ್ದೇಶಿಸಬೇಕು ಎಂಬ ಅದಮ್ಯ ಆಸಕ್ತಿ ಅವರಲ್ಲಿ ಇದೆ. ರಾಜ್‌ಕುಮಾರ್ ಕುಟುಂಬದವರಿಗೇ ಮೊದಲ ಸಿನಿಮಾ ನಿರ್ದೇಶನ ಮಾಡಬೇಕು ಎಂಬುದು ಅವರ ಕನಸು. ನನಗೂ ಕಥೆ ಇಷ್ಟವಾಯ್ತು. ಸಾಹಸ ನಿರ್ದೇಶಕನೊಬ್ಬ ಸಿನಿಮಾವನ್ನು ಹೇಗೆ ನಿರ್ದೇಶಿಸಬಹುದು ಎಂಬ ಕುತೂಹಲವಿತ್ತು. ತುಂಬ ಚೆನ್ನಾಗಿ ಮಾಡಿದ್ದಾರೆ.

**◆ ಈ ಹಿಂದೆಯೂ ಹಲವು ಸಲ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದೀರಾ. ಈ ಪಾತ್ರದ ವಿಶೇಷ ಏನು?**

ಆ ಪಾತ್ರದ ಲುಕ್‌ನಲ್ಲಿ, ಕಾಸ್ಟ್ಯೂಮ್, ಮೀಸೆ, ಅವನು ನೋಡುವ ಸ್ಟೈಲ್, ಮಾತಾಡುವ ರೀತಿ ಎಲ್ಲವೂ ತುಂಬ ಭಿನ್ನವಾಗಿದೆ. ಆ ವಿಭಿನ್ನತೆಯೇ ನಂಗೆ ಇಷ್ಟವಾಯ್ತು. ಪಾತ್ರದ ಡ್ರೆಸ್‌ಕೋಡ್‌ನಿಂದ ಹಿಡಿದು ಪ್ರತಿಯೊಂದನ್ನು ರವಿವರ್ಮ ಅವರೇ ಮುತುವರ್ಜಿ ವಹಿಸಿ ವಿನ್ಯಾಸ ಮಾಡಿದ್ದಾರೆ.

**◆ ವಿವೇಕ್ ಒಬೆರಾಯ್ ಜೊತೆ ನಟಿಸಿದ ಅನುಭವ ಹೇಗಿತ್ತು?**

ವಿವೇಕ್ ಮೊದಲಿನಿಂದಲೂ ಪರಿಚಯ ನನಗೆ. ನಮ್ಮ ಫ್ಯಾಮಿಲಿ ಫ್ರೆಂಡ್ ಅವರು. ಅವರು ಚಿಕ್ಕ ಹುಡುಗ ಆಗಿದ್ದಾಗಿನಿಂದಲೂ ನೋಡಿದ್ದೀನಿ ನಾನು. ನನ್ನನ್ನು ಅಣ್ಣಾ ಎಂದೇ ಕರೆಯುತ್ತಾರೆ ಅವರು. ನನ್ನ ಜೊತೆ ಈ ಸಿನಿಮಾದಲ್ಲಿ ನಟಿಸಿರುವುದಕ್ಕೆ ಅವರು ತುಂಬ ಖುಷಿಪಟ್ಟರು.

**◆ ಈ ಚಿತ್ರದಲ್ಲಿನ ಹಾಡೊಂದರಲ್ಲಿ ನಿಮ್ಮ ಡಾನ್ಸ್ ಬಗ್ಗೆಯೂ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ...**

ಹೌದು. ತುಂಬ ದಿನ ಆದಮೇಲೆ ಡಾನ್ಸ್ ಮಾಡಿಸಬೇಕು ಎಂದು ರವಿಮರ್ಮ ಪ್ಲ್ಯಾನ್ ಮಾಡಿದರು. ಸರಿ ಮಾಡಿ ನೋಡೋಣ ಎಂದು ನಾನೂ ಒಪ್ಪಿಕೊಂಡೆ. ಎಲ್ಲರೂ ಸೇರಿ ನನ್ನಿಂದ ಮಾಡಿಸುತ್ತಾರಷ್ಟೆ. ನಾನೇ ಮಾಡಿದೆ ಎಂದರೆ ತಪ್ಪು.

**◆ ಮುಂದಿನ ಸಿನಿಮಾಗಳು ಯಾವವು?**

‘ರುಸ್ತುಂ’ ಆದಮೇಲೆ ‘ದ್ರೋಣ’ ಬರುತ್ತದೆ. ಆಮೇಲೆ ದ್ವಾರಕೀಶ್ ಅವರ ಸಿನಿಮಾ ಇದೆ. ‘ಭಜರಂಗಿ 2’ ಶೂಟಿಂಗ್ ಶುರುವಾಗಿದೆ. ಮೊದಲ ಹತ್ತು ದಿನದ ಶೆಡ್ಯೂಲ್ ಮುಗಿಸಿಕೊಳ್ಳುತ್ತೇವೆ. ಆಮೇಲೆ ಭುಜದ ಶಸ್ತ್ರಚಿಕಿತ್ಸೆಗಾಗಿ ಜುಲೈ 5ಕ್ಕೆ ಲಂಡನ್‌ಗೆ ಹೋಗ್ತಾ ಇದೀನಿ. ಅದಾದ ಮೇಲೆ ಮೂರು ತಿಂಗಳು ರೆಸ್ಟ್ ತೆಗೆದುಕೊಳ್ಳಬೇಕು. ಚಿತ್ರೀಕರಣದಲ್ಲಿ ಪಾಲ್ಗೊಳ್ಳುವುದು ಕಷ್ಟ. ಅದರಲ್ಲಿಯೂ ಆ್ಯಕ್ಷನ್ ಮಾಡುವುದು ಸಾಧ್ಯವಿಲ್ಲ. ಹಾಗಾಗಿ ಹತ್ತು ದಿನದ ಶೂಟಿಂಗ್ ಮುಗಿಸಿ ಹೋಗುತ್ತಿದ್ದೇನೆ. ■





## ಸರ್ಕಾರಿ ಶಾಲೆಯಲ್ಲಿ ಪ್ರಣೀತಾ

ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಜನಪ್ರಿಯ ನಟಿಯಾಗಿ ಗುರ್ತಿಸಿಕೊಂಡಿರುವ ಪ್ರಣೀತಾ ಸಮಾಜಸೇವೆಯಲ್ಲಿಯೂ ಅಷ್ಟೇ ಆಸ್ಥೆಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಆರೋಗ್ಯಕರವಾದ ಸಮಾಜ ಕಟ್ಟಲು ಶಾಲೆಗಳು ಸುಸಜ್ಜಿತವಾಗಿರಬೇಕು ಎಂಬುದು ಅವರ ನಂಬಿಕೆ. ಹೀಗಾಗಿಯೇ ಅವರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮೊದಲ ಹೆಜ್ಜೆಯಾಗಿ ಅವರು ಹಾಸನ ಜಿಲ್ಲೆಯ ಆಲೂರಿನ ಸರ್ಕಾರಿ ಶಾಲೆಯೊಂದನ್ನು ದತ್ತು ತೆಗೆದುಕೊಂಡಿದ್ದಾರೆ. ಅಲ್ಲದೆ ಆ ಶಾಲೆಯ ಅಭಿವೃದ್ಧಿಗಾಗಿ ಐದು ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದಾರಂತೆ. ಮೊದಲ ಹಂತವಾಗಿ ಸುಸಜ್ಜಿತವಾದ ಶೌಚಾಲಯ ತಲೆಯೆತ್ತಿದೆ.

ತಾವು ಐಷಾರಾಮದ ಅರಮನೆಯಲ್ಲಿದ್ದು, ಸಮಾಜಸೇವೆಗೆಂದು ಒಂದಿಷ್ಟು ಹಣ ಕೊಟ್ಟು ಸುಮ್ಮನಾಗಿಬಿಡುವ ಜಾಯಮಾನ ಅವರದಲ್ಲ. ಬದಲಿಗೆ ತಾವೇ ಸ್ವತಃ ಆ ಶಾಲೆಗೆ ತೆರಳಿ ಮಕ್ಕಳೊಂದಿಗೆ ಬೆರೆತಿದ್ದಲ್ಲದೆ ತರಗತಿಯಲ್ಲಿ ನಿಂತು ಪಾಠವನ್ನೂ ಮಾಡಿದ್ದಾರಂತೆ.

ಅವರ ಪ್ರಯತ್ನಕ್ಕೆ ಒಳ್ಳೆಯ ಸ್ಪಂದನವೂ ವ್ಯಕ್ತವಾಗಿದೆಯಂತೆ. ಆ ಶಾಲೆಯ ಶಿಕ್ಷಕರು ಮತ್ತು ಮಕ್ಕಳ ಸಹಾಯದಿಂದ ಮಾದರಿ ಶಾಲೆಯಾಗಿ ಪರಿವರ್ತಿಸಿದ ಸಾರ್ಥಕತೆ ಪ್ರಣೀತಾ ಅವರದ್ದು. ಮುಂದೆಯೂ ಇನ್ನಷ್ಟು ಇಂಥ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಗೊಳಿಸುವ ಕನಸು ಅವರಿಗಿದೆಯಂತೆ. ■